RNU AIR DHARWAD

# APRIL 24, 2024

## ALL INDIA RADIO- DHARWAD

## PRADESH SAMACHARA (KANNADA) 7:05 AM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ರಾಜ್ಯದ ಮೊದಲ ಹಂತದ ಲೋಕಸಭೆ ಚುನಾವಣೆಗೆ, ನಾಡಿದ್ದು ಶುಕ್ರವಾರ ಮತದಾನ; 14 ಕ್ಷೇತ್ರಗಳಲ್ಲಿ ಇಂದು ಸಂಜೆ ಬಹಿರಂಗ ಪ್ರಚಾರ, ಅಂತ್ಯ.
- ಲೋಕಸಭಾ ಚುನಾವಣೆ ಹಿನ್ನೆಲೆ, ಮತದಾರ ಜಾಗೃತಿಗೆ ಜಿಲ್ಲಾಡಳಿತಗಳ ವಿಶೇಷ ಪ್ರಯತ್ನ.
- ಬಳ್ಳಾರಿಯ ಸಂಗನಕಲ್ಲು ವಸ್ತು ಸಂಗ್ರಹಾಲಯದಲ್ಲಿ, 'ನರ್ಮದಾ ಮನುಷ್ಯ'ನ ತ್ರೀ–ಡಿ ಮಾದರಿ, ಸದ್ಯದಲ್ಲೇ ಪ್ರದರ್ಶನಕ್ಕೆ ಅಣಿ.
- ರಾಜ್ಯದ 15ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ, ಮುಂದಿನ 5 ದಿನ ಬಿಸಿಗಾಳಿ ಬೀಸುವ ಸಾಧ್ಯತೆ.

<><><>

ಈಗ ವಾರ್ತೆಗಳ ವಿವರ

<><><>

ರಾಜ್ಯದ ಮೊದಲ ಹಂತದ, ಲೋಕಸಭೆ ಸಾರ್ವತ್ರಿಕ ಚುನಾವಣೆಗೆ, ನಾಡಿದ್ದು ಶುಕ್ರವಾರದಂದು, ಮತದಾನ ನಡೆಯಲಿರುವ ಹಿನ್ನೆಲೆ, ವಿವಿಧ ರಾಜಕೀಯ ಪಕ್ಷಗಳ ನಾಯಕರಿಂದ ರಾಜ್ಯದಲ್ಲಿ ಬಿರುಸಿನ ಪ್ರಚಾರ ಮುಂದುವರೆದಿದೆ. ರಾಜ್ಯದಲ್ಲಿ ಮೊದಲ ಹಂತದ ಚುನಾವಣೆ ನಡೆಯಲಿರುವ, 14 ಕ್ಷೇತ್ರಗಳಲ್ಲಿ ಇಂದು ಸಂಜೆ ಬಹಿರಂಗ ಪ್ರಚಾರ ಅಂತ್ಯಗೊಳ್ಳಲಿದೆ.

ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ, ಬಿ.ಎನ್.ಚಂದ್ರಪ್ಪ ಪರವಾಗಿ, ಎ.ಐ.ಸಿ.ಸಿ. ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ, ವಾದ್ರಾ ಚಿತ್ರದುರ್ಗದಲ್ಲಿ ಬಹಿರಂಗ ಸಭೆಯಲ್ಲಿ ಭಾಗಿಯಾಗಿ, ಮತ ಯಾಚಿಸಿದರು.

ಬೆಂಗಳೂರಿನ ಬೊಮ್ಮನಹಳ್ಳಿಯಲ್ಲಿ, ಬೆಂಗಳೂರು ದಕ್ಷಿಣ ಲೋಕಸಭಾ ಮತಕ್ಷೇತ್ರದ ಬಿಜೆಪಿ ಅಭ್ಯರ್ಥಿ ತೇಜಸ್ವಿ ಸೂರ್ಯ ಪರವಾಗಿ, ಕೇಂದ್ರ ಗೃಹ ಖಾತೆ ಸಚಿವ ಅಮಿತ್ ಶಾ ಮಾರ್ಗ ಪ್ರದರ್ಶನ ಕೈಗೊಂಡು, ಮತಯಾಚಿಸಿದರು.

ಚಿಕ್ಕಮಗಳೂರು ಜಿಲ್ಲೆ ಲೋಕಸಭೆ ಚುನಾವಣಾ ಪ್ರಚಾರಕ್ಕಾಗಿ, ಇಂದು ಬೆಳಗ್ಗೆ 10 ಗಂಟೆಗೆ ಅಮಿತ್ ಶಾ ಅವರು ಭೇಟಿ ನೀಡಿ, ಉಡುಪಿ – ಚಿಕ್ಕಮಗಳೂರು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೋಟಾ ಶ್ರೀನಿವಾಸ ಪೂಜಾರಿ ಪರ ಮತ ಯಾಚಿಸಲಿದ್ದಾರೆ.

ವಿಜಯಪುರ ಜಿಲ್ಲೆಯ ಮೀಸಲು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ರಾಜು ಆಲಗೂರ ಪರ, ಇದೇ 26 ರಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಮತ ಯಾಚಿಸಲಿದ್ದಾರೆ ಎಂದು, ಕೈಗಾರಿಕಾ ಖಾತೆ ಸಚಿವ ಎಂ.ಬಿ.ಪಾಟೀಲ್ ವಿಜಯಪುರದಲ್ಲಿ ತಿಳಿಸಿದ್ದಾರೆ.

ತುಮಕೂರಿನ ಕೆ.ಬಿ.ಕ್ರಾಸ್‌ನಲ್ಲಿ, ಇಂದು ಬುಧವಾರ, ಹಿಂದುಳಿದ ವರ್ಗಗಳ ಬೃಹತ್ ಸಮಾವೇಶದಲ್ಲಿ, ಕೇಂದ್ರ ಗೃಹ ಖಾತೆ ಸಚಿವ ಅಮಿತ್ ಶಾ ಭಾಗಿಯಾಗಲಿದ್ದಾರೆ.

<><><>

ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬರಬೇಕಾಗಿರುವ, ಬರ ಪರಿಹಾರದಲ್ಲಿ ತಾರತಮ್ಯವನ್ನು ವಿರೋಧಿಸಿ, ಬೆಂಗಳೂರಿನ ವಿಧಾನಸೌಧದ ಆವರಣದಲ್ಲಿರುವ ಗಾಂಧಿ ಪ್ರತಿಮೆಯ ಎದುರು ಆಯೋಜಿಸಿದ ಧರಣಿಯಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಂಡರು.

<><><>

ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ್ ನೇತೃತ್ವದಲ್ಲಿ, ಬಿಜೆಪಿ ಮುಖಂಡರು ಮುಖ್ಯ ಚುನಾವಣಾಧಿಕಾರಿಗಳ ಕಚೇರಿಗೆ ತೆರಳಿ, ಗಾಂಧಿ ಪ್ರತಿಮೆ ಬಳಿ ಪ್ರತಿಭಟನೆ ನಡೆಸುತ್ತಿರುವುದು ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆ ಎಂದು, ದೂರು ನೀಡಿದರು.

<><><>

ಲೋಕಸಭಾ ಚುನಾವಣೆ ಹಿನ್ನೆಲೆ, ಮತದಾರರಲ್ಲಿ ಜಾಗೃತಿ ಮೂಡಿಸಲು, ಬೆಳಗಾವಿ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ, ಕೋಟೆ ಕೆರೆಯಲ್ಲಿ, ದೋಣಿ ವಿಹಾರದ ಮೂಲಕ, ಮತದಾನ ಜಾಗೃತಿ ಕಾರ್ಯಕ್ರಮಕ್ಕೆ, ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಹಾಗೂ ಜಿಲ್ಲಾ ಪಂಚಾಯ್ತಿ ಸಿ.ಇ.ಓ. ರಾಹುಲ್ ಶಿಂಧೆ  ಚಾಲನೆ ನೀಡಿದರು.

ಚಿಕ್ಕಮಗಳೂರು ಜಿಲ್ಲೆಯ ಪ್ರವಾಸಿ ತಾಣಗಳಾದ, ಬಾಬಾ ಬುಡನ್ ಗಿರಿ ಹಾಗೂ ಸೀತಾಳಯ್ಯನ ಗಿರಿಯಲ್ಲಿ, ಮತದಾನದ ಮಹತ್ವದ ಕುರಿತು, ಜಿಲ್ಲಾ ಸ್ವೀಪ್ ಸಮಿತಿ ಸ್ವಚ್ಛತಾ ಕಾರ್ಯಕ್ರಮದ ಮೂಲಕ, ಜನ ಜಾಗೃತಿ ಮೂಡಿಸಿತು.

ಮಂಗಳೂರು ಮೀನುಗಾರಿಕಾ ಬಂದರಿನಲ್ಲಿ, ದಕ್ಷಿಣಕನ್ನಡ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಮತದಾನ ಜಾಗೃತಿ ನಡೆಯಿತು.

ಭಾರತ ಚುನಾವಣಾ ಆಯೋಗದ ನಿರ್ದೇಶನಗಳನ್ನು ಪಾಲಿಸುವುದು ಕಡ್ಡಾಯವಾಗಿದ್ದು, ವಿವಿಧ  ರಾಜಕೀಯ ಪಕ್ಷಗಳ ಕಾರ್ಯಕರ್ತರಿಗೆ ಮತ್ತು ಪೋಲಿಂಗ್ ಏಜೆಂಟರಿಗೆ, ತಿಳಿವಳಿಕೆ ನೀಡುವ ಕಾರ್ಯವಾಗಬೇಕು ಎಂದು, ವಿಜಯಪುರ ಮೀಸಲು ಲೋಕಸಭಾ ಕ್ಷೇತ್ರದ ಚುನಾವಣೆಯ, ಸಾಮಾನ್ಯ ವೀಕ್ಷಕ ಡಾಕ್ಟರ್ ರತನಕನ್ವರ ಗಡವಿಚರಣ ಸೂಚಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸೂಕ್ಷ್ಮ ವೀಕ್ಷಕರು ಹಾಗೂ ನೋಡೆಲ್ ಅಧಿಕಾರಿಗಳಿಗೆ, ಸಾಮಾನ್ಯ ವೆಚ್ಚ ವೀಕ್ಷಕರಾದ ಅಮೋಯ್ ಕುಮಾರ್, ಎರಡನೇ ಹಂತದ ತರಬೇತಿ, ನೀಡಿದರು.

<><><>

ಬಳ್ಳಾರಿ ಲೋಕಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿ, 85 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಮತ್ತು ವಿಕಲಚೇತನರು ಮನೆಯಿಂದಲೇ ಮತದಾನ ಮಾಡಲು, ಈ ತಿಂಗಳ 28, ಭಾನುವಾರ ಮತ್ತು 29 ಸೋಮವಾರದಂದು, ಅನುಕೂಲ ಕಲ್ಪಿಸಲಾಗಿದೆ ಎಂದು, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ತಿಳಿಸಿದ್ದಾರೆ.

600 ಜನ ವೃದ್ಧರು, 432 ಜನ ವಿಕಲಚೇತನರು ಮನೆಯಿಂದ ಮತ ಹಾಕಲು ಕೋರಿದ್ದಾರೆ ಎಂದು, ಆಕಾಶವಾಣಿಗೆ ಮಾಹಿತಿ ನೀಡಿದ್ದಾರೆ.

<><><>

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಧ್ವನಿ 40 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಬಳ್ಳಾರಿಯ ಹೆಸರಾಂತ, ರಾಬರ್ಟ್ ಬ್ರೂಸ್‌ಫುಟ್ ಸಂಗನಕಲ್ಲು ಪ್ರಾಗ್ ಐತಿಹಾಸಿಕ ವಸ್ತು ಸಂಗ್ರಹಾಲಯದಲ್ಲಿ, ಮಧ್ಯ ಪ್ರದೇಶದ ನರ್ಮದಾ ನದಿ ಕಣಿವೆ ಪ್ರದೇಶದಲ್ಲಿ ಪತ್ತೆ ಮಾಡಲಾದ, ಭಾರತದ ಏಕೈಕ ಆದಿ ಮಾನವನ ತಲೆಬುರಡೆ, 'ನರ್ಮದಾ ಮನುಷ್ಯ'ನ ಥ್ರೀ ಡೈಮೆನ್ಷನ್ ಮಾದರಿಯನ್ನು ಸದ್ಯದಲ್ಲೇ, ಪ್ರದರ್ಶಿಸಲು ಯೋಜಿಸಲಾಗಿದೆ. ಭಾರತದ ಪ್ರಾರಂಭಿಕ ಜನಾಂಗಗಳನ್ನು ಗುರುತಿಸುವ ಹಾಗೂ ಅವುಗಳ ಇತಿಹಾಸವನ್ನು ಪುನರ್ ರಚಿಸುವ, ಅಂತಾರಾಷ್ಟ್ರೀಯ ಯೋಜನೆ ಅಡಿ, ಕಾರ್ಯನಿರತರಾಗಿರುವ ಧಾರವಾಡದ ಹೆಸರಾಂತ ಪುರಾತತ್ವ ಶಾಸ್ತ್ರಜ್ಞ, ಪ್ರೊಫೆಸರ್ ರವಿ ಕೋರಿಶೆಟ್ಟರ್, ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ಪ್ರೊ. ರವಿ ಕೋರಿಶೆಟ್ಟರ್ ಧ್ವನಿ 45 ಸೆಕೆಂದುಗಳು

<><><>

ರಾಜ್ಯದ ಕಿತ್ತೂರು ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದ, ಹಲವು ಜಿಲ್ಲೆಗಳು ಸೇರಿ, ಮಧ್ಯ ಭಾಗದ 15ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ, ಮುಂದಿನ 5 ದಿನಗಳ ಕಾಲ ಬಿಸಿಗಾಳಿ ಹೆಚ್ಚಾಗುವ ಸಾಧ್ಯತೆಯಿದೆ ಎಂದು, ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಬೀದರ್, ಬೆಳಗಾವಿ, ಬಾಗಲಕೋಟೆ, ವಿಜಯಪುರ, ಕಲಬುರ್ಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ಗದಗ, ಧಾರವಾಡ, ದಾವಣಗೆರೆ, ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಮುಂದಿನ 5 ದಿನಗಳ ಕಾಲ ಬಿಸಿಗಾಳಿ ಹೆಚ್ಚಾಗಲಿದೆ ಎಂದು, ರಾಜ್ಯ ನೈಸರ್ಗಿಕ ಪ್ರಕೋಪಗಳ ನಿರ್ವಹಣಾ ಕೇಂದ್ರ ತಿಳಿಸಿದೆ. ಹಾಗಾಗಿ, ಈ ಜಿಲ್ಲೆಗಳ ಜನತೆ, ಬಿಸಿ ಗಾಳಿಯಿಂದ ತಪ್ಪಿಸಿಕೊಂಡು ಸುರಕ್ಷಿತವಾಗಿರಲು, ಅಧಿಕ ನೀರು, ಮಜ್ಜಿಗೆ, ತಂಪಾದ ಪಾನೀಯ ಸೇವನೆ ಸೇರಿದಂತೆ, ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ, ಸೂಚಿಸಿದೆ.

<><><>

ಬಿಸಿಲಿನ ತಾಪ ಹೆಚ್ಚುತ್ತಿರುವ ಹಿನ್ನೆಲೆ, ನಿರ್ಜಲೀಕರಣಗೊಂಡು ಅಶಕ್ತವಾಗದಂತೆ, ರೈತಾಪಿ ವರ್ಗದ ಬೆನ್ನೆಲುಬು, ಜಾನುವಾರುಗಳನ್ನು ರಕ್ಷಿಸುವುದು ಮುಖ್ಯ. ಬಿರು ಬೇಸಿಗೆಯಲ್ಲಿ ಜಾನುವಾರು ಆರೋಗ್ಯ ರಕ್ಷಣೆಯ ಕುರಿತು, ಉತ್ತರಕನ್ನಡ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕ ಡಾಕ್ಟರ್ ಕೆ.ಎಂ. ಮೋಹನ್ ಕುಮಾರ್, ಆಕಾಶವಾಣಿಗೆ ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ಡಾಕ್ಟರ್ ಕೆ.ಎಂ. ಮೋಹನ್ ಕುಮಾರ್ ಧ್ವನಿ 50 ಸೆಕೆಂದುಗಳು

<><><>

ಬೆಂಗಳೂರಿನಲ್ಲಿ ಐತಿಹಾಸಿಕ ಹೂವಿನ ಕರಗ, ಇಂದು ಬೆಳಗಿನ ಜಾವ ಜರುಗಿತು. ಅಂದಾಜು, 3 ಸಾವಿರ ವೀರ ಕುಮಾರರು ಕರಗದಲ್ಲಿ ಭಾಗವಹಿಸಿದ್ದರು. ಚೈತ್ರ ಪೌರ್ಣಮೆ ದಿನ, ಮಧ್ಯ ರಾತ್ರಿ 12.30ಕ್ಕೆ, ಕರಗ ಶಕ್ತ್ಯೋತ್ಸವ ನಡೆಯಿತು. ಪೂಜಾರಿ ಎ.ಜ್ಞಾನೇಂದ್ರ 14ನೇ ಬಾರಿ ಬೆಂಗಳೂರು ಕರಗ ಹೊತ್ತರು. ಪ್ರಸಿದ್ಧ ದ್ರೌಪದಿ ದೇವಿ ಕರಗ ಶಕ್ತ್ಯೋತ್ಸವ ತಡರಾತ್ರಿ ಧರ್ಮರಾಯ ಸ್ವಾಮಿ ದೇವಸ್ಥಾನದಿಂದ ಹೊರಟಿತು. ಬಳಿಕ ಗಣಪತಿ ಮತ್ತು ಮುತ್ಯಾಲಮ್ಮ ದೇವಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ, ಕೆ.ಆರ್. ಮಾರುಕಟ್ಟೆ ತಲುಪಿತು. ಮಸ್ತಾನ್‌ಸಾಬ್ ದರ್ಗಕ್ಕೆ ಭೇಟಿ ನೀಡಿ, ಅಲ್ಲಿಂದ ಬಳೆಪೇಟೆ, ಕುಂಬಾರಪೇಟೆ, ಗೊಲ್ಲರಪೇಟೆ, ತಿಗಳರಪೇಟೆಗಳಲ್ಲಿ ಕರಗ ಮೆರವಣಿಗೆ ಸಾಗಿತು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ರಾಜ್ಯದ ಮೊದಲ ಹಂತದ ಲೋಕಸಭೆ ಚುನಾವಣೆಗೆ, ನಾಡಿದ್ದು ಶುಕ್ರವಾರ ಮತದಾನ; 14 ಕ್ಷೇತ್ರಗಳಲ್ಲಿ ಇಂದು ಸಂಜೆ ಬಹಿರಂಗ ಪ್ರಚಾರ ಅಂತ್ಯ.
- ಲೋಕಸಭಾ ಚುನಾವಣೆ ಹಿನ್ನೆಲೆ, ಮತದಾರ ಜಾಗೃತಿಗೆ ಜಿಲ್ಲಾಡಳಿತಗಳ ವಿಶೇಷ ಪ್ರಯತ್ನ.
- ಬಳ್ಳಾರಿಯ ಸಂಗನಕಲ್ಲು ವಸ್ತು ಸಂಗ್ರಹಾಲಯದಲ್ಲಿ, 'ನರ್ಮದಾ ಮನುಷ್ಯ'ನ ಥ್ರೀ–ಡಿ ಮಾದರಿ, ಸದ್ಯದಲ್ಲೇ ಪ್ರದರ್ಶನಕ್ಕೆ, ಅಣಿ.
- ರಾಜ್ಯದ 15ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ, ಮುಂದಿನ 5 ದಿನ ಬಿಸಿಗಾಳಿ ಬೀಸುವ ಸಾಧ್ಯತೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ